

ಕರೆಗಂಟೆಯ ಶಬ್ದ ಕೇಳಿ, ಮಧ್ಯಾಹ್ನದ ಸಿಹಿನಿದ್ದೆಯಲ್ಲಿದ್ದ ನಾನು ಎದ್ದು ಬಾಗಿಲು ತೆಗೆದೆ. ಪಕ್ಕದ ಕೋಣೆಯಲ್ಲಿ ಕರಮಚಂದ ನಿದ್ದೆಯಲ್ಲಿದ್ದ. ಬಂದವಳು ಕೃಶ ಕಾಯದ ಮಧ್ಯ ವಯಸ್ಕ ಹೆಂಗಸು. ಮೇಲುನೋಟಕ್ಕೆ ಮನೆಗೆಲಸದವಳಂತಿದ್ದಳು.

‘ಮನೆಗೆಲಸಕ್ಕೆ ಜನದ ಅಗತ್ಯವಿಲ್ಲವಮ್ಮ’, ನನ್ನ ಮಾತಿಗೆ ಆಕೆ ತಲೆ ಅಲುಗಿಸಿದಳು.

‘ಕರಮಚಂದ ಸಾಹೇಬರನ್ನು ಕಾಣಬೇಕಿತ್ತು.’

ಇವಳಿಗೆ ಕರಮಚಂದನಲ್ಲೇನು ಕೆಲಸವಪ್ಪಾ? ಆತನ ನಿದ್ದೆಗೆ ಭಂಗ ತರಲೇ ಅಂತ ಯೋಚಿಸುವಾಗ, ಆತನೇ ಪ್ರತ್ಯಕ್ಷನಾದ.

‘ಬನ್ನಿಯಮ್ಮ, ಏನಾಗಬೇಕಿತ್ತು?’

‘ನಾನು ವಲ್ಸಮ್ಮ. ಅಂಬಟ್ಟಿ ಗ್ರಾಮದಿಂದ ಬಂದಿದ್ದೇನೆ. ಅಲ್ಲೊಬ್ಬರ ಮನೆಯಲ್ಲಿ ಮೂರು ತಿಂಗಳಿನಿಂದ ಮನೆಗೆಲಸ ಮಾಡ್ತಿದ್ದೇನೆ. ಆದರೆ ನನಗೆ ಅಲ್ಲಿ ತುಂಬಾ ಭಯವಾಗ್ತಿದೆ. ಅದ್ಕೆ ಯಾರೋ ಹೇಳಿದ್ರು, ನಿಮ್ಮಲ್ಲಿ ಹೇಳಿದರೆ, ಸಹಾಯವಾಗುತ್ತೆ ಅಂತ.’

‘ಕೂತ್ಕೊ. ನಿನ್ ಕತೆ ಪೂರಾ ಹೇಳು.’

ಆಕೆ ತನ್ನ ಪ್ರವರ ಆರಂಭಿಸಿದಳು.

ಅಂಬಟ್ಟಿ ಗ್ರಾಮದ ಕ್ಯಾಮಾಟ್ ರಸ್ತೆಯ ಕೊನೆಯಲ್ಲಿರುವ ಮನೆಯಲ್ಲಿ ಆಕೆ ಕೆಲಸ ಮಾಡುವುದು. ಅಲ್ಲೇ ಮೊದಲು ಕೆಲಸ ಮಾಡುತ್ತಿದ್ದ ಅಲುಮೇಲು ಅನ್ನುವಾಕೆ ವಲ್ಸಮ್ಮನನ್ನು ಈ ಕೆಲಸಕ್ಕೆ ಸೇರಿಸಿದ್ದಂತೆ. ಅಲುಮೇಲುವಿಗೆ ವಿಚಿತ್ರ ರೋಗ ಭಾದಿಸಿ, ಕೆಲಸ ಬಿಡಬೇಕಾಯಿತಂತೆ. ಆ ಮನೆ ಬಹಳ ವಿಚಿತ್ರವಾಗಿದೆಯಂತೆ. ಸುತ್ತಲೂ ಎತ್ತರದ ಕಾಂಪೌಂಡು. ಒಳಗೇನಿದೆ ಅಂತ ಹೊರಗಿನಿಂದ ಕಾಣದು. ಸುಮಾರು ಅರ್ಧ ಎಕರೆ ಜಾಗ. ಒಂದು ಬದಿಯಲ್ಲಿ ದೊಡ್ಡ ಮನೆ. ಅರ್ಧ ಕಾಂಪೌಂಡಿನಲ್ಲಿ ಪುಟ್ಟ ಕಾಡಿನಂತೆ ದಟ್ಟವಾದ ಮರಗಳು. ವಲ್ಸಮ್ಮನಿಗೆ ಮನೆ ಗುಡಿಸಿ, ಅಡುಗೆ ತಯಾರಿಸುವ ಕೆಲಸ. ಅಲ್ಲಿ ಮಾಲಿಕನೊಬ್ಬನೇ ಇರುವುದು. ಆಕೆಗೆ ಮಾಲೀಕನ ಹೆಸರು ಗೊತ್ತಿಲ್ಲ. ಸಾಬ್ ಅಂತ ಆಕೆ ಕರೆಯುವುದು. ಬಹಳ ತೆಳ್ಳಗಿನ ಮನುಷ್ಯ. ಗಂಟು ಮುಖ. ಸರಿಯಾಗಿ ಹತ್ತಕ್ಕೆ ಅಲ್ಲಿಗೆ ಹೋಗಬೇಕು. ಸಮಯದ ವಿಷಯದಲ್ಲಿ ಆತ ಕಟ್ಟುನಿಟ್ಟು. ಕೆಲಸ ಮುಗಿಸಿ, ಹನ್ನೆರಡೂವರೆಗೆ ಆಕೆ ತೆರಳಬೇಕು. ಆಕೆ ಮನೆಯಲ್ಲಿರುವ ಹೊತ್ತಿಗೆ ಆತನ ಭೇಟಿಯಾಗುವುದೂ ಅಪರೂಪವಂತೆ. ಕೆಲವೊಮ್ಮೆ ಮನೆಯ ಬಾಗಿಲು ತೆರೆದಿರಿಸಿ, ಆತ ಎಲ್ಲಿಯೋ ನಾಪತ್ತೆಯಾಗಿರುತ್ತಾನೆ. ಏನಾದರೂ ಸೂಚನೆ ಕೊಡಲಿದ್ದಾಗ ಮಾತ್ರ ಆತ ಆಕೆಗಾಗಿ ಕಾಯುತ್ತಿರುತ್ತಿದ್ದನಂತೆ. ತೆಳ್ಳಗಿನ ಮನುಷ್ಯನಾದರೂ ಆತ ಹೊಟ್ಟೆಬಾಕ. ಎರಡು ಮೂರು ಜನಕ್ಕಾಗುವಷ್ಟು ಅಡುಗೆ ಮಾಡುತ್ತಿದ್ದಳಂತೆ. ಮೊದಲು ಕೇವಲ ಸಸ್ಯಾಹಾರ ಮಾತ್ರ ತೆಗೆದುಕೊಳ್ಳುತ್ತಿದ್ದವನು ಎರಡು ತಿಂಗಳಿಂದ ಮೀನು ತಿನ್ನುತ್ತಿದ್ದಾನೆ. ಅಡುಗೆಗೆ ಬೇಕಾದ ಸಾಮಾಗ್ರಿಗಳನ್ನು ಆಕೆಯೇ ತರಬೇಕು. ಆಕೆ ಅಲ್ಲಿ ಕೆಲಸ ಮಾಡುವ ಮುಖ್ಯ ಕಾರಣ, ಆತ ನೀಡುವ ಸಂಬಳ. ತಿಂಗಳಿಗೆ ಮೂವತ್ತು ಸಾವಿರ. ಆ ಹಣದಾಸೆಗೆ ಆಕೆಗೆ ಕೆಲಸ ಬಿಡಲು ಮನಸ್ಸಿಲ್ಲ. ಇದುವರೆಗೆ ಒಮ್ಮೆಯೂ ಆತ ಆಕೆಯನ್ನು ಗದರಿಸಿದ್ದು ಇಲ್ಲವಾದರೂ, ಆಕೆಗೆ ಏನೋ ಭಯವಾಗುತ್ತದಂತೆ. ಏನು ಮಾಡಬೇಕೆಂದು ತೋಚದೆ ನಮ್ಮಲ್ಲಿ ಆಗಮಿಸಿದ್ದಳು.

‘ನಿನಗೆ ಅಲ್ಲಿ ಭಯವಾಗಿದ್ದೇಕೆ?’

‘ದೆವ್ವದಂತಹ ದೊಡ್ಡ ನಿರ್ಜನ ಮನೆ. ಒಂದು ಕೋಣೆಗೆ ಯಾವಾಗಲೂ ಬೀಗ ಹಾಕಿರುತ್ತದೆ. ಆ ಕೋಣೆಯ ಬಳಿಗೆ ಹೋದರೆ, ಗುಂಯ್ ಎಂಬ ಸದ್ದು ಅಸ್ಪಷ್ಟವಾಗಿ ಕೇಳುತ್ತದೆ. ಅದೇನೆಂದು ಗೊತ್ತಿಲ್ಲ. ಆ ಕೋಣೆಯನ್ನೂ ಗುಡಿಸಲೇ ಅಂತ ಕೇಳಿದಾಗ, ನಿನಗೆ ಅಧಿಕ ಪ್ರಸಂಗ ಬೇಡ ಎಂದು ಕಟುವಾಗಿ ಹೇಳಿದ್ದ. ಅಲ್ಲೇನೋ ರಹಸ್ಯವಾಗಿದ್ದು ಇದೆ, ಸಾರ್.’

‘ನೀನು ಅಲುಮೇಲುವಲ್ಲಿ ವಿಚಾರಿಸಿದ್ದೀಯಾ? ಅವಳಿಗೂ ಭಯವಾಗಿತ್ತೇ?’

‘ನಾನು ಅವಳಲ್ಲಿ ವಿಚಾರಿಸಬೇಕು ಅಂತಿದ್ದೆ. ಅಷ್ಟರಲ್ಲಿ ಅವಳು ಸತ್ತೇಹೋದಳು. ಎಂತದೋ ವಿಚಿತ್ರ ಕಾಯಿಲೆಯಿಂದ. ಜ್ವರ, ಹಗಲಿಡೀ ನಿದ್ದೆ ಮಾಡುವುದು. ರಾತ್ರಿ ನಿದ್ದೆ ಮಾಡುವುದಿಲ್ಲ ಅಂತ ಅವ್ಳ ಅಮ್ಮ ಹೇಳಿದಳು. ಹಳ್ಳಿ ಡಾಕ್ಟರಿಗೆ ಗೊತ್ತೇ ಆಗಲಿಲ್ಲ. ದೊಡ್ಡಾಸ್ಪತ್ರೆಗೆ ಹೋಗಲು ಅವಳಲ್ಲಿ ಹಣವೂ ಇರಲಿಲ್ಲ. ಏನೇನೋ ಒದರುತ್ತಿದ್ದಳು. ಒಂದು ದಿನ ಸತ್ತಳು.’

‘ಸಾಬ್ ಯಾವಾಗಿನಿಂದ ಮೀನೂಟ ಶುರು ಮಾಡಿದ್ದು?’

‘ನನ್ಗೆ ಸರಿಯಾಗಿ ನೆನಪಿದೆ. ಇಗ್ಗುತ್ತಪ್ಪನ ದೇವಸ್ಥಾನದ